## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

ಓ.ಎಸ್. ಸಂಖ್ಯೆ.**1160/2022** ಪಿ.ಡಬ್ಲೂ .1

ದಿನಾಂಕಃ 19-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ

1. ಮುನಿಯಮ್ಮ ರವರು ಅಸಲು ದಾವಾ ಸಂ.781/1992 ರಂತೆ ದಾವೆ ಸಲ್ಲಿಸಿದ್ದರು. ಅದೇ ರೀತಿ ಒಂದು ಮನೆಯ ಬಗ್ಗೆ ಹೇಳಿದ್ದು , ಸದರಿ ಮನೆಯ ಸಂಖ್ಯೆಯನ್ನು ಹಾಗೂ ದಾವಾ ಸಂಖ್ಯೆಯನ್ನು ಪ್ರಮಾಣ ಪತ್ರದಲ್ಲಿ ಹೇಳಲು ತೊಂದರೆ ಇರಲಿಲ್ಲ ಎಂದರೆ ಸರಿ. ಮುನಿಯಮ್ಮ ರವರು ಹಕ್ಕು ಬಿಡುಗಡೆ ಮಾಡಿರುತ್ತಾರೆ ಎಂದು ಹೇಳಿದ್ದು, ಸದರಿ ದಾಖಲೆಯನ್ನು ಹಾಜರು ಮಾಡಿರುತ್ತೀರಾ ಎಂದರೆ ಇಲ್ಲ, ವಿಭಾಗ ಪತ್ರ ಹಾಜರು ಮಾಡಿರುತ್ತೇನೆ. ಸದರಿ ಬಿಡುಗಡೆ ಪತ್ರವನ್ನು ಹಾಜರು ಮಾಡಿರುತ್ತೇನೆ ಎಂದು ಪ್ರಮಾಣ ಪತ್ರದಲ್ಲಿ ಸುಳ್ಳು ನುಡಿದಿರುತ್ತೇನೆ ಎಂದರೆ ಸರಿಯಲ್ಲ. ದಿ.23-01-2003 ರಂದು ಯಾವುದೇ ರಾಜೀ ಪತ್ರ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ದಾಸಪ್ಪ ನವರು ಮುನಿಯಮ್ಮ ರವರಿಗೆ ರೂ.50 ಸಾವಿರ ಹಣ ನೀಡಿದ ಬಗ್ಗೆ ನಾನು ನೋಡಿರುತ್ತೇನೆ. ಸದರಿ ಹಣವನ್ನು ನಗದಾಗಿ ನೀಡಿರುತ್ತೇನೆ. ವಿಲ್ ದಾಖಲೆಯಲ್ಲಿ ವಾದಿ ರತ್ನಮ್ಮ ಮತ್ತು ಮುನಿಯಪ್ಪ ಮಗ ಮತ್ತು ಮಗಳು ಎಂದು ಹೇಳಿ ಬರೆಯಿಸಿರುತ್ತಾರೆ ಎಂದರೆ ಸಾಕ್ಷಿ ಆ ಕಾರಣದಿಂದಲೇ ಈ ದಾವೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-2 ರಲ್ಲಿ ರತ್ನಮ್ಮ ಮಗಳು ಮತ್ತು ಮುನಿಯಪ್ಪ ಅಳಿಯ ಎಂದು ಬರೆದಿರುತ್ತಾರೆ ಎಂದರೆ ನನ್ನ ಅಜ್ಜಿ ಮುನಿಯಮ್ಮ ರವರಿಗೆ ಮಕ್ಕಳು ಇರಲಿಲ್ಲ ಎಂದು ನುಡಿಯುತ್ತಾರೆ.

2. ನನ್ನ ವಿರುದ್ಧ ಪ್ರತಿವಾದಿ ಅಸಲು ದಾವೆ ಸಂ.261/2013 ರಂತೆ ವಿಭಾಗದ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ಅದು ವಿಚಾರಣಾ ಹಂತದಲ್ಲಿದೆ. ಸದರಿ ದಾವೆಯ ವಿಚಾರಣೆಯಲ್ಲಿ ನಾನು ಪ್ರತಿವಾದಿ ರತ್ನಮ್ಮ ರವರು ನನ್ನ ಅಜ್ಜಿಯ ತಂಗಿ ಚಿಕ್ಕಮುನಿಯಮ್ಮ ನವರ ಮಗಳು ಎಂದು

ಹೇಳಿದ್ದೇನೆ ಎಂದರೆ ಹೌದು. ಸದರಿ ಚಿಕ್ಕಮುನಿಯಮ್ಮ ಮಾಲೂರು ತಾಲ್ಲೂಕು ಸೀತಾನಾಯಕನಹಳ್ಳಿಯಲ್ಲಿ ವಾಸವಿದ್ದರು. ಪ್ರತಿವಾದಿ ರತ್ನಮ್ಮ ನವರ ತಾಯಿ ಮುನಿಯಮ್ಮ ಮತ್ತು ಚಿಕ್ಕಮುನಿಯಮ್ಮ ಅಕ್ಕ-ತಂಗಿಯರು ಎಂದರೆ ಸಾಕ್ಷಿ ಮುನಿಯಮ್ಮ ರವರಿಗೆ ಯಾವುದೇ ಮಕ್ಕಳು ಇರಲಿಲ್ಲ ಎಂದು ನುಡಿಯುತ್ತಾರೆ. ಮುನಿದಾಸಪ್ಪ ಮತ್ತು ಮುನಿಯಮ್ಮ ರವರಿಗೆ ಮಕ್ಕಳು ಇಲ್ಲದ ಕಾರಣ ಚಿಕ್ಕಮುನಿಯಮ್ಮ ರವರ ಮಗಳಾದ ರತ್ನಮ್ಮ ನವರನ್ನು ಸಾಕಿ ಸಲುಹಿ ಸ್ವಂತ ಮಗಳಾಗಿ ನೋಡಿಕೊಂಡಿರುತ್ತಾರೆ ಎಂದರೆ ಸುಳ್ಳು. ಪ್ರತಿವಾದಿ ರತ್ನಮ್ಮ ರವರು ತನ್ನ ಚಿಕ್ಕವಯಸ್ಸಿನಿಂದ ಮದುವೆ ಆಗುವವರೆಗೂ ಕಾಳಪ್ಪನಹಳ್ಳಿಯಲ್ಲಿ ಬೆಳೆದಿರುತ್ತಾರೆ ಎಂದರೆ ಸುಳ್ಳು. ಮುನಿದಾಸಪ್ಪ ಮತ್ತು ಚಿಕ್ಕಮುನಿಯಮ್ಮ ರವರ ಪಡಿತರ ಚೀಟಿಯಲ್ಲಿ ಪ್ರತಿವಾದಿ ರತ್ನಮ್ಮ ಪ್ರತಿವಾದಿ ಹೆಸರು ನಮೂದಾಗಿದೆ ಎಂದರೆ ಹೌದು. ನಾನು ಪ್ರತಿವಾದಿ ವಿರುದ್ಧ ಅಸಲು ದಾವಾ ಸಂ.344/2013 ರಂತೆ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೇನೆ ಎಂದರೆ ಹೌದು. ದಾವಾ ಆಸ್ತಿಯ ಚಕ್ಕುಬಂದಿ ಮತ್ತು ಮುನಿಯಮ್ಮ ರವರ ಭಾಗಕ್ಕೆ ಬಂದ ಸೃಷ್ಟಿ ಮಾಡಿರುವ ದಿ.23-01-2003 ರ ವಿಭಾಗ ಪತ್ರದ ಚಕ್ಕುಬಂದಿ ಎರಡು ಒಂದೇ ಎಂದರೆ ಸಾಕ್ಷಿ ನಾನು ಯಾವುದೇ ದಾಖಲೆ ಸೃಷ್ಟಿ ಮಾಡಿಲ್ಲ ಎಂದು ನುಡಿಯುತ್ತಾರೆ.

3. ಪ್ರತಿವಾದಿಗಳು ಸಹ ನನ್ನ ವಿರುದ್ಧ ಅಸಲು ದಾವಾ ಸಂ.2245/2022 ರ ದಾವೆ ಸಲ್ಲಿಸಿದ್ದಾರೆ ಎಂದರೆ ಹೌದು. ಸದರಿ ದಾವೆ ಈ ದಾವೆಯ ಜೊತೆ ವಿಚಾರಣಾ ನಡೆಯುತ್ತಿದೆ ಎಂದರೆ ಹೌದು. ನಿಪಿ-2 ರ ಬಗ್ಗೆ 2010-11 ರಲ್ಲಿ ತಿಳಿದು ಬಂದಿರುತ್ತದೆ. ದಿ.23-01-2003 ರ ವಿಭಾಗ ಪತ್ರದಲ್ಲಿ ಒಂದು ಹಲಸಿನ ಮರದ ಬಗ್ಗೆ ನಮೂದು ಇದೆ ಎಂದರೆ ಹೌದು. ನಿಪಿ-14 ರಲ್ಲಿ ಕಾಣುವ ಹಲಸಿನ ಮರ ಪ್ರತಿವಾದಿಗಳಿಗೆ ಸೇರ ತಕ್ಕ ಮರ ಎಂದರೆ ಸುಳ್ಳು. ನಿಪಿ-14 ರಂತೆ ಕಾಣುವಂತೆ ಬೆಳೆ ಇಲ್ಲದೇ ಇದ್ದರೂ ಕೇವಲ ಫೋಟೋ ತೆಗೆಯುವ ಸಲುವಾಗಿ ನೀಡಿರುವ ಭಂಗಿ ಎಂದರೆ ಸುಳ್ಳು. ದಿ.23-01-2003 ರ ವಿಭಾಗ ಪತ್ರವನ್ನು ನಿಪಿ-2 ಬರೆಯುವ ಮೊದಲೇ ಸೃಷ್ಟಿ ಮಾಡಿರುತ್ತೇವೆ ಎಂದರೆ

ಸುಳ್ಳು. ಮುನಿಯಮ್ಮ ರವರು ದಿ.03-06-2010 ರಂದು ಮರಣ ಹೊಂದಿರುತ್ತಾರೆ. ಅವರ ಎಲ್ಲಾ ಉತ್ತರ ಕ್ರಿಯೆಗಳನ್ನು ಪ್ರತಿವಾದಿ ಮಾಡಿರುತ್ತಾರೆ ಎಂದರೆ ಸುಳ್ಳು, ನಾವು ಮಾಡಿರುತ್ತೇವೆ. ಮುನಿಯಮ್ಮ ರವರು ಯಾವುದೇ ವಿಭಾಗ ಪತ್ರವನ್ನು ಮಾಡಿಕೊಟ್ಟಿಲ್ಲದೇ ಇದ್ದರೂ ದಾವಾ ಆಸ್ತಿಯನ್ನು ಲಪಾಟಯಿಸುವ ಉದ್ದೇಶದಿಂದ ಸುಳ್ಳು ದಾಖಲೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮುನಿಯಮ್ಮ ರವರಿಗೆ ತೊಂದರೆ ಕೊಟ್ಟ ಕಾರಣ ಅವರು ಬೆಂಗಳೂರು ನ್ಯಾಯಾಲಯದಲ್ಲಿ ಅಸಲು ದಾವಾ ಸಂ.781/1992 ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸುಳ್ಳು. ಅವರು ಯಾರ ಹೇಳಿಕೆಯ ಮೇರೆಗೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ದಾವೆ ರಾಜೀ ಮೂಲಕ ತೀರ್ಮಾನ ಆಗಿರುತ್ತದೆ ಎಂದರೆ ಸರಿ. ಸದರಿ ರಾಜೀ ಮೂಲಕ ಸರ್ವೇ ನಂ.38/1 ರಲ್ಲಿ 1 ಎಕರೆ 11 ಗುಂಟೆ ಮತ್ತು 1 ಹಲಸಿನ ಮರ, ಸರ್ವೇ ನಂ.38/2 ರಲ್ಲಿ 30 ಗುಂಟೆ ಹಾಗೂ ಈಗ ಪ್ರತಿವಾದಿ ವಾಸವಿರುವ ಮನೆ ಮುನಿಯಮ್ಮ ರವರ ಭಾಗಕ್ಕೆ ಬಂದಿರುತ್ತದೆ ಎಂದರೆ ಹೌದು.

ಮುಂದುವರೆದ ಪಾಟೀ ಸವಾಲಿಗೆ ಕಾಲವಕಾ ಶಕೋರಿದ್ದು, ನೀಡಲಾಯಿತುತ.
**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.